(c) Rs. 173 per annum by way of Hullabanai.

(d) Yes.

(e) No.

(f) As the annual income is only Rs. 173 need for auditing the accounts is not felt so far.

(g) Yes, if found necessary.

ಶ್ರೀ ಪುಟ್ಟೇಗೌಡ.—ಈ ಚತ್ರಕ್ಕಿರುವ ಜನಾಂ ಭೂಮಿ 124 ಎಕರೆ 23 ಗುಂಟೆ ಇದೆ ಎಂದು ಹಿಂದೆ ಈ ಸಭೆಯಲ್ಲಿ ಉತ್ತರ ಕೊಟ್ಟಿದ್ದಾರೆ. ಈಗ ಇಲ್ಲಿ ಕೊಟ್ಟಿರುವ ಉತ್ತರದಲ್ಲಿ ಬೇರೆ ಒಂದು ಚತ್ರಕ್ಕೆ ಸೇರಿದಂತಿರುವ 128 ಎಕರೆ 12 ಗುಂಟೆಗಳು ಎಂದು ಹೇಳುತ್ತಿದ್ದಾರೆ. ಹೀಗೆ ಕೊಡುವುದು ಸರಿಯೇ ?

†ಶ್ರೀ ಕವಿದಾಳ್ ಮಂಜಪ್ಪ.—ನ್ನಲ್ಲಿ ಹೆಚ್ಚು ಕಡಿಮೆ ಇರಬಹುದು. ಬೇಕಾದರೆ ತಮಗೆ ಡೆಪ್ಯುಟೀ ಕಮಿಷನರವರಿಂದ ಬಂದಿರುವ ರಿಪೋರ್ಟ್‌ನ್ನು ಓದುತ್ತೇನೆ.

"There is a Choultry called"

"Shri Venkatakrishnasetty Choultry....." ಎಂದಿದೆ.

ಶ್ರೀ ಪುಟ್ಟೇಗೌಡ.—ನಾನು ಕೇಳಿರುವ ಚತ್ರದ ರೆಕ್ಕಪತ್ರಗಳನ್ನು ಕೇಳಿದರೆ ಅದರ ಪಕ್ಕ ದಲ್ಲಿರುವ ಬೇರೊಂದು ಚತ್ರದ ವಿವರಗಳನ್ನು ಕೊಟ್ಟಿದ್ದಾರೆ. ಇದನ್ನು ಪುನಃ ಸರ್ಕಾರ ಪರಿಶೀಲಿಸುತ್ತದೆಯೇ ?

Sri KADIDAL MANJAPPA.— I am prepared to read put the report of the Deputy Commissioner with regard to this question. If there is a mistake, I will verify.

Mr. SPEAKER.— I will hold over the question.

PROMOTIONS OF TAHSILDARS OF BELLARY DISTRICT.

*Q.—661. Sri M. M. PATEEL (Hadagalli).—

Will the Government be pleased to state :—

(a) whether it is fact that none of Bellary District Tahsildars were promoted recently, though they are in the seniority list ;

(b) if so, the reason therefor ;

(c) the number of them who are in the list at present ?

A.—Sri B. D. JATTI (Chief Minister).—

(a) No.

(b) Does not arise in view of the answer to Clause (a).

(c) According to the provisional Inter-State Seniority List of Tahsildars, the number of Tahsildars of Bellary District yet to be promoted is five.

ಶ್ರೀ ಎಂ. ಎಂ. ಪಾಟೀಲ್.—(ಸಿ) ಗೆ ಉತ್ತರವಾಗಿ ಬಳ್ಳಾರಿಯ ಐದು ಜನ ತಹಶೀಲು ದಾರರುಗಳಿಗೆ ಬಡತಿ ದೊರೆಯಬೇಕು ಎಂದು ಹೇಳಲಾಗಿದೆ. ಆದರೆ ಇವರಲ್ಲಿ ಕೆಲವರು ಈಗಾಗಲೇ ಚೆಂಪರರಿಯಾಗಿ ಸಾತ್ ಕ್ಯಾನರಾ ಡಿಲ್ಲೆಯಲ್ಲಿ ಅಸಿಸ್ಟೆಂಟು ಕಮೀಷನರುಗಳಾಗಿ ಕೆಲಸ ಮಾಡುತ್ತಿದ್ದಾರೆ. ಆದರೆ ಬಳ್ಳಾರಿ ಜಲ್ಲೆಯವರನ್ನಾರನ್ನೂ ಇಲ್ಲಿಗೆ ತೆಗೆದುಕೊಂಡಿಲ್ಲ, ಕಾರಣವೇನು?

†Sri B. D. JATTI.—There are in all 13 Tahsildars who have been allotted from that Bellary District to Mysore. Out of that 13, 8 have already been promoted. Five are to be promoted. Out of that five, one has already retired. The remaining four are to be promoted shortly.

ಶ್ರೀ ಎಂ. ಎಂ. ಪಾಟೀಲ್.— ಐದು ಜನರ ಪೈಕಿ ರಿಟ್ಯೈರು ಆದವರು ಒಬ್ಬರ ಹೆಸರನ್ನೂ ಮತ್ತು ಉಳಿಕೆಯಾದ ನಾಲ್ವರ ಹೆಸರನ್ನೂ ತಿಳಿಸಲಕ್ಕೆ ಆಗುತ್ತದೆಯೇ?

ಶ್ರೀ ಬಿ. ಡಿ. ಜತ್ತಿ.—ಆಗುತ್ತದೆ. ಅವರ ಹೆಸರುಗಳು ಹೀಗೆ ಇವೆ.

1. ಶ್ರೀ ಕೊಟ್ಟಯ್ಯ.
2. ಶ್ರೀ ಕೆ. ರಹಮತುಲ್ಲಾಖಾನ್,
3. ಶ್ರೀ ಡಿ. ಬೋಧರಾಯಾಚಾರ್,
4. ಶ್ರೀ ಕೆಂಪೇಗಡ,

ಮತ್ತು 5. ಶ್ರೀ ಅಬ್ದುಲ್ ಕರೀಂ.

ಇವರಲ್ಲಿ, ಶ್ರೀ ಬೋಧರಾಯಾಚಾರ್ಯರು ಈಚೆಗೆ ರಿಟ್ಯೈರಾದರು.

ಶ್ರೀ ಎಂ. ಎಂ. ಪಾಟೀಲ್.— ಹೀಗೆ ನಿಧಾನ ಮಾಡುತಾ, ಇರುವುದರಿಂದ ಅವರು ತಮ್ಮ ಕೊನೆಯ ಅವಧಿಯಲ್ಲಿ ತಮ್ಮ ಸರ್ವಿಸ್ಸನ್ನು ಪೂರ್ತಿ ಮಾಡಿಕೊಳ್ಳಲು ಅವಕಾಶವಿಲ್ಲದೇ ಹೋಯಿತು ಎನ್ನುವುದು ಸರಕಾರಕ್ಕೆ ಗೊತ್ತಿರಲ್ಲವೇ ?

ಶ್ರೀ ಬಿ. ಡಿ. ಜತ್ತಿ.—ಅವಧಿ ಮುಗಿದ ನಂತರ ಅಂತಹವರನ್ನು ಅಧಿಕಾರದಲ್ಲಿ ಇಟ್ಟುಕೊಳ್ಳಲಕ್ಕೆ ಬರುವುದಿಲ್ಲ. ಆ ರೀತಿ ಯಾದ ಪ್ರಾಪಿಷನ್ನು ಬೇಕಾದರೆ ತಾವು ಮಾಡಿ ಕೊಡ ಬೇಕಾಗುತ್ತದೆ.

ಶ್ರೀ ಎಂ. ಎಂ. ಪಾಟೀಲ್.—ಪ್ರಾವಿಷನ್ನು ಮಾಡಬೇಕೆನ್ನುವ ಉದ್ದೇಶದಿಂದ ಹೇಳುತ್ತಿಲ್ಲ. ಮತ್ತು ಆ ರೀತಿಯಾದ ಪ್ರಾವಿಷನ್ನನ್ನು ಮಾಡಬೇಕೆಂದೂ ಬಯಸುವುದಿಲ್ಲ. ಒಬ್ಬರು ರಿಟ್ಯೈರು ಆಗುವ ಕೊನೆಯ ಅವಧಿಯೊಳಗೆ ಸ್ವಲ್ಪ ಸಾಕಾರ್ಯವನ್ನು ಮಾಡಿ ಕೊಟ್ಟಿದ್ದರೆ ಅವರು ಸ್ವಲ್ಪ ಕಾಲದಲ್ಲಿ ತಮ್ಮ ಹೊಸ ಹುದ್ದೆಯನ್ನು ಅನುಭವಿಸಲು ಅವಕಾಶ ಸಿಗುತ್ತಿತ್ತು. ಈ ರೀತಿ ನಿಧಾನ ಮಾಡುವುದರಿಂದ ಅವರಿಗೆ ಸಿಗದೇ ಹೋಯಿತು ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಡಿ. ಜತ್ತಿ.—ತಾವು ಹೇಳುವಂತೆ ಆಗಿಲ್ಲ. ಇಲ್ಲಿ ಪ್ರಮೋಷನ್ನು ದೊರೆಯ ಬೇಕಾಗಿದ್ದ ಶ್ರೀ ಬೋಧರಾಯಾಚಾರ್ಯರಿಗೆ ರಿಟ್ಯೈರಾಗಲು ಎರಡು ದಿನ ಮುಂಚೆ ಬರಬೇಕಾಗಿತ್ತು. ಅಂತಹವರಿಗೆ ಪ್ರಮೋಷನ್ನು ಮಾಡಲಕ್ಕೆ ಶಕ್ಯವಿಲ್ಲ.

Sri J. B. MALLARADHYA.—I rise to a point of order Sir. Whether the list of people eligible for promotion is not treated as confidential at the Government level and whether it can be revealed to the House, because I want to know whether this information need not be confidential.

Sri B. D. JATTI.—This list has been published in the gazette as provisional list. Where is point in saying confidential? If Mr. Mallaradhya still objects, I cannot say anything.

Sri J. B. MALLARADHYA.— I take it that the list maintained at the Governmental level of candidates eligible for promotion from Thasildar to Assistant Commissioner or from Assistant Commissioner to higher levels was treated at confidential. If that or so, I will withdraw my point of order.

1-30 P. M.

CONSTRUCTION OF BUILDING FOR GOVERNMENT HIGH SCHOOL AT HAGARIBOMMANAHALLI IN BELLARY DISTRICT.

*Q.—664. M. M. PATEEL (Hadagalli).—

Will the Government be pleased to state:—

(*a*) whether they are aware that there is no accomodation in the existing Government High School at Hagaribommanahalli in Bellary District.

(*b*) if so, the action Government have taken in the matter;

(*c*) since what time this matter is pending before the Department;

(*d*) whether they have sanctioned the Plan and estimate of the proposed building construction of the said High School;

(*e*) if so, whether they will issue instructions to take up the construction work of the building at least to complete 2 or 3 rooms before the academic year commences, *i.e.*, next June 1961, to provide suitable accommodation for the students?

*A.—Sri ANNA RAO GANAMUKHI (Minister for Education).—

(*a*) Yes.

(*b*) Administrative sanction was accorded for the construction of Government High school bulding at Hagaribommanahalli at a cost Rs. 63,000,

(*c*) Since December 1958.

(*d*) Yes.

(*e*) The Superintending Engineer Raichur Circle, and the Executive Enginer, P. W. D., Bellary Division, Bellary have already been requested to make immediate necessary arrangements for the execution of the work.

ಶ್ರೀ ಎಂ. ಎಂ. ಪಾಟೀಲ್.—ಈ ಹೈಸ್ಕೂಲ್ ಅನ್ನಿಭಾವವನ್ನು ಮಾನ್ಯ ಗೃಹ ಮಂತ್ರಿಗಳು ಹಾಕಿದಿಂದರು. ಈಗ ಪುನಃ ಆ ಜಮೀನನ್ನು ಅವರ ವಶಕ್ಕೆಕೊಡದೆ ಅದು ಬಿತ್ತನೆಯಾಗಿದೆ. ಬಹಳ ದಿವಸಗಳಿಂದ ನ್ಯಳಾಭಾವವಿದೆಯೆಂದು ಹೇಳಿದರೂ ಸರ್ಕಾರದವರು ವಿತಕ್ಕೆ ಅದನ್ನು ವಶ ಕೊಡಿಸಲಕ್ಕೆ ಲಕ್ಷ್ಯ ಕೊಡುವುದಿಲ್ಲ?

† ಶ್ರೀ ಅಣ್ಣಾರಾವ್ ಗಣಮುಖಿ.—ಈ ವಿಷಯ ಈ ಪ್ರಶ್ನೆಯಲ್ಲಿಲ್ಲ. ಈಗ ಅವರ ಪ್ರಶ್ನೆಗೆ ಉತ್ತರ ಕೊಡಲಕ್ಕೆ ನನ್ನಲ್ಲಿ ಆ ಮಾಹಿತಿ ಇಲ್ಲ———